# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,**
**ಬೃಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು**

ಸಂಖ್ಯೆ:ಸ.ಇಂ/ವಾ–144/ವಾರ್ಡ್ ಸಭೆ/2020–21 ದಿನಾಂಕ:26/03/2021

## ವಾರ್ಡ್ –144ರ ವಾರ್ಡ್ ಸಭೆಯ ನಡವಳಿ

ದಿನಾಂಕ:26/03/2021 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್–144ರ ವಾರ್ಡ್ ಕಛೇರಿಯಲ್ಲಿ (ದಕ್ಷಿಣ ವಲಯ) ವಾರ್ಡ್ 144–ಸಿದ್ದಾಪುರ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ನರಸರಾಮರಾವ್ | ಅಧೀಕ್ಷಕ ಅಭಿಯಂತರರು (ದಕ್ಷಿಣ ವಲಯ) | ಹಾಜರಿದ್ದರು |
| 2 | ಶ್ರೀ. ಆರ್. ಕೊಟ್ರೇಶ್ ನಾಯಕ್ | ಸಹಾಯಕ ಅಭಿಯಂತರರು ವಾರ್ಡ್–144 | ಹಾಜರಿದ್ದರು |
| 3 | ಶ್ರೀ. ಕೆ.ಎಲ್. ನಾಗರಾಜು | ಸಹಾಯಕ ಇಂಜಿನಿಯರ್ BESCOM | ಹಾಜರಿದ್ದರು |
| 4 | ಕುಮಾರಿ. ಸುರೇಖ ಆರ್. | ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ | ಹಾಜರಿದ್ದರು |

| ಕ್ರಮ ಸಂಖ್ಯೆ | ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ಮಂಜುನಾಥ | ಸ್ಥಳೀಯರು | ಹಾಜರಿದ್ದರು |

| ಕ್ರಮ ಸಂಖ್ಯೆ | ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ಕೆಂಪರಾಜು ಓ. | ಸ್ಥಳೀಯರು | ಹಾಜರಿದ್ದರು |
| 2 | ಶ್ರೀ. ಅಜ್ಮಲ್ ಖಾನ್ | ಸ್ಥಳೀಯರು | ಹಾಜರಿದ್ದರು |
| 3 | ಶ್ರೀ. ಮೊಹಮ್ಮದ್ ಖುರೇಬ್ | ಸ್ಥಳೀಯರು | ಹಾಜರಿದ್ದರು |
| 4 | ಶ್ರೀ. ಸುರೇಶ್ ಹೆಚ್.ಕೆ. | ಸ್ಥಳೀಯರು | ಹಾಜರಿದ್ದರು |
| 5 | ಶ್ರೀ. ಮಲ್ಲಿಕಾರ್ಜುನಯ್ಯ | | |
| 6 | ಶ್ರೀ. ಜಿ. ಅಶೋಕ್ | | |

ಮು.ಪು.ನೋ..



Scanned with CamScanner

ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ಸದಸ್ಯರು ಮತ್ತು ಸ್ಥಳೀಯರು ಪರಸ್ಪರ ಪರಿಚಯದೊಂದಿಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಮಾತನಾಡಿ ವಾರ್ಡ್ ವ್ಯಾಪತಿಯಲ್ಲಿ ಸಿ.ಸಿ. ಟಿವಿ ಅಳವಡಿಸಲು ಹಲವಾರು ಬಾರಿ ಕೋರಿರುವ ಹಿನ್ನೆಲೆಯಲ್ಲಿ ವಿದ್ಯುತ್ ವಿಭಾಗದವರು ಕಡತವು ಬಿಬಿಎಂಪಿ ಕೇಂದ್ರ ಕಛೇರಿಯಲ್ಲಿದ್ದು, ಅತಿ ಶೀಘ್ರವಾಗಿ ಅನುಮೋದನೆಗೊಂಡ ಕೂಡಲೇ ಕಾಮಗಾರಿ ಪ್ರಾರಂಭಿಸುವುದಾಗಿ ತಿಳಿಸಿದರು.
- ವಾರ್ಡ್ ಪ್ರದೇಶದಲ್ಲಿ ಹಲವಾರು ದೊಡ್ಡ ಮಳೆನೀರು ಚರಂಡಿಗಳಿದ್ದು, (SWD) ಸದರಿ ಚರಂಡಿಯನ್ನು ಹೊಂದಿಕೊಂಡಂತೆ ಹಾಗೂ ಒತ್ತುವರಿ ಮಾಡಿಕೊಂಡು ಕಟ್ಟಡಗಳು ನಿರ್ಮಾಣವಾಗಿರುವ ಬಗ್ಗೆ ಹಿಂದಿನ ಸಭೆಯಲ್ಲಿ ಸ್ಥಳೀಯರು ದೂರು ನೀಡಿದ್ದರು. ಆದರೆ ಸದರಿ ಇಲಾಖೆಯ ಅಭಿಯಂತರರು ಇಂದಿನ ಸಭೆಗೆ ಗೈರುಹಾಜರಾಗಿದ್ದು, ದೂರವಾಣಿ ಮುಖಾಂತರ ಕರೆ ಮಾಡಿ ಈ ಬಗ್ಗೆ ಕ್ರಮ ವಹಿಸುವುದಾಗಿ ಅಧ್ಯಕ್ಷರಿಗೆ ಮನವರಿಕೆ ಮಾಡಿದರು.
- ವಾರ್ಡ್ ಪ್ರದೇಶದಲ್ಲಿ ಆರೋಗ್ಯದ ಹಿತದೃಷ್ಟಿಯಿಂದ ಕೋವಿಡ್‌ಗೆ ಸಿಂಪಡಿಸಿದ ಔಷದಿಯನ್ನು ಮತ್ತೊಮ್ಮೆ ಸಿಂಪಡಿಸಲು ಸ್ಥಳೀಯರು ಹಿಂದಿನ ಸಭೆಯಲ್ಲಿ ಕೋರಿದ್ದರು. ಆದರೆ ಪಾಲಿಕೆ ವತಿಯಿಂದ ಈ ತಹಲ್‌ವರೆವಿಗೂ ಔಷದಿಯ ಸರಬರಾಜು ಆಗದ ಕಾರಣ ಸಿಂಪಡಿಸಲು ಸಾಧ್ಯವಾಗಿರುವುದಿಲ್ಲವೆಂದು ವಾರ್ಡಿನ ಅಭಿಯಂತರರು ಸಭೆಗೆ ತಿಳಿಸಿದರು.
- ವಾರ್ಡ್ ಪ್ರದೇಶದ ರಸ್ತೆಗಳ ಗುರುತನ್ನು ತಿಳಿಸಲು ಅಳವಡಿಸಲಾಗುವ ನಾಮಫಲಕಗಳಲ್ಲಿ ಸರ್ಕಾರದ ಅಧಿಸೂಚನೆಯಂತೆ ನಾಮಫಲಕವನ್ನು ಅಳವಡಿಸಲು ಹಿಂದಿನ ಸಭೆಯಲ್ಲಿ ಸ್ಥಳೀಯರು ಕೋರಿದ್ದರು. ಸದರಿ ಕಡತವು ಅನುಮೋದನೆಗಾಗಿ ಸಲ್ಲಿಸಲಾಗಿದ್ದು, ಅನುಮೋದನೆಗೊಂಡ ನಗಂತ ಕೂಡಲೇ ಕ್ರಮ ಕೈಗೊಳ್ಳಲಾಗುವುದೆಂದು ವಾರ್ಡಿನ ಅಭಿಯಂತರರು ಸಭೆಗೆ ತಿಳಿಸಿದರು.
- ಮರಿಯಮ್ಮ ದೇವಸ್ಥಾನದ ಸುತ್ತಮುತ್ತಲಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿರುವುದಿಲ್ಲವೆಂದು ಹಿಂದಿನ ಸಭೆಯಲ್ಲಿ ಹಾಜರಿದ್ದ ಸ್ಥಳೀಯರು ಕೋರಿದ್ದರು. ಈ ವಿಷಯವಾಗಿ BWSSB ಇಲಾಖೆಯವರು ನೀರು ಮಲಿನವಾಗಿರುವುದನ್ನು ಸರಿಪಡಿಸಲು ಮನವಿ ಸಲ್ಲಿಸಿದ್ದು, ಸದರಿ ಮನವಿ ಅನ್ವಯ ಕಡತವು ಅನುಮೋದನೆಗೊಂಡ ನಂತರ ಮುಂದಿನ ಕ್ರಮ ಕೈಗೊಳ್ಳುವುದಾಗಿ ಅಧ್ಯಕ್ಷರು ಸಭೆಗೆ ತಿಳಿಸಿದರು.
- ಬಾಸ್ಕೆಟ್ ಬಾಲ್ ಕೋರ್ಟ್‌ನ್ನು ಸಾರ್ವಜನಿಕರಿಗಾಗಿ ಅಭಿವೃದ್ಧಿ ಪಡಿಸಲು ಹಿಂದಿನ ಸಭೆಯಲ್ಲಿ ಸ್ಥಳೀಯರು ಕೋರಿದ್ದರು. ಬಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ಬಿಬಿಎಂಪಿ ಸ್ವತ್ತು ಎಂಬ ನಾಮಫಲಕವನ್ನು ಅಳವಡಿಸಲಾಗಿರುತ್ತದೆ ಎಂದು ವಾರ್ಡಿನ ಅಭಿಯಂತರರಿಗೆ ಸಭೆಗೆ ತಿಳಿಸಿದರು.

ಮ.ತಿ.ನೋ..



Scanned with CamScanner

- ಮುರಳಿ ಸ್ಲಂನಲ್ಲಿರುವ ಆರ್.ಓ. ಪ್ಲಾಂಟ್ ಸ್ಥಗಿತಗೊಂಡಿದ್ದು, ಸದರಿ ಪ್ಲಾಂಟ್‌ನಲ್ಲಿ ಅಳವಡಿಸಲಾಗಿ ಬೋರ್‌ವೆಲ್ ಅನ್ನು ಸರಿಪಡಿಸಲು ಕಳುಹಿಸಿಕೊಡಲಾಗಿದ್ದು, ಕೂಡಲೇ ಸಾರ್ವಜನಿಕರ ಅನುಕೂಲಕ್ಕೆ ನೀಡಲಾಗುವುದೆಂದು ಹಾಗೂ ಸದರಿ ವಾರ್ಡ್‌ನಲ್ಲಿ ಅಳವಡಿಸಲಾಗಿರುವ ಬೋರ್‌ವೆಲ್‌ಗಳಿಗೆ ಬೆಸ್ಕಾಂ ಮೀಟರ್‌ಗಳನ್ನು ಅಳವಡಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರಿಗೆ ಪತ್ರ ಬರೆಯಲು ಅಧ್ಯಕ್ಷರು ವಾರ್ಡಿನ ಅಭಿಯಂತರರಿಗೆ ಸೂಚಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಸುರೇಶ್ ರವರು ಮಾತನಾಡಿ ಅಭಯ ಆಸ್ಪತ್ರೆ ಹತ್ತಿರ ಮತ್ತು ದಯಾನಂದ ಸ್ಲಂನಲ್ಲಿರುವ ಆರ್.ಓ ಪ್ಲಾಂಟ್‌ಗಳು ಕೂಡಲೇ ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿಕೊಡಬೇಕೆಂದು, ಹಾಗೂ ಸರ್ಕಾರಿ ಶಾಲೆಯ ಒಳಗಡೆ ಅಭಿವೃದ್ಧಿ ಮತ್ತು ಸೋಮೇಶ್ವರನಗರ ಕಮಾನನ್ನು ಅಭಿವೃದ್ಧಿ ಹಾಗೂ ವಾಂಬೆ ಕ್ವಾಟ್ರಸ್‌ನಲ್ಲಿರುವ ಶ್ರೀ ಮರಿಯಮ್ಮ ದೇವಸ್ಥಾನ ಅಭಿವೃದ್ಧಿ ಪಡಿಸುವಂತೆ ಕೋರಿದರು. ಅದರಂತೆ ಸಂಬಂಧಪಟ್ಟವರಿಗೆ ಈ ಬಗ್ಗೆ ತಿಳಿಸಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಮಂಜುನಾಥ್ ರವರು ಮಾತನಾಡಿ ಕೆ.ಎಂ. ಕಾಲೋನಿಯಲ್ಲಿರುವ ಮುನೇಶ್ವರ ದೇವಸ್ಥಾನದ ನಿರ್ವಹಣೆಯ ಬಗ್ಗೆ ಅಧ್ಯಕ್ಷರನ್ನು ಕೋರಿದರು. ಅದರಂತೆ ಅಧ್ಯಕ್ಷರು ಈ ವಿಷಯವನ್ನು ಚರ್ಚಿಸುವುದಾಗಿ ಸಭೆಗೆ ತಿಳಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀಮತಿ. ಕಲ್ಯಾಣಿ ಮತ್ತು ಸರೋಜಮ್ಮ ರವರು ಮಾತನಾಡಿ ಹೊಸೂರು ಮುಖ್ಯರಸ್ತೆ ಹೊಂಬೇಗೌಡನ ಸ್ಲಂ ಹತ್ತಿರ ಸಾರ್ವಜನಿಕರು ರಸ್ತೆ ದಾಟಲು ಸ್ಕೈವಾಕ್ ಅಳವಡಿಸಲು ಕೋರಿದರು ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಕಡತವು ಡಿ.ಪಿ.ಆರ್ ಅನುಮೋದನೆಗೆ ಸಲ್ಲಿಸಲಾಗಿದ್ದು, ಅನುಮೋದನೆಗೊಂಡ ನಂತರ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ರವರಿಗೆ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದೆಂದು ಸಭೆಗೆ ತಿಳಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಕೆಂಪರಾಜು ಓ. ರವರು ಮಾತನಾಡಿ ಸೋಮೇಶ್ವರ ಕಾಲೋನಿಯ 6ನೇ ಮುಖ್ಯರಸ್ತೆಯಲ್ಲಿರುವ ಶೌಚಾಲಯ ಕಟ್ಟಡವನ್ನು ತೆರವುಗೊಳಿಸಿ ಸದರಿ ಜಾಗದಲ್ಲಿ ಸಾರ್ವಜನಿಕರ ಉದ್ದೇಶಕ್ಕೆ ಬಳಸಲು ಕೋರಿದರು. ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಸಂಬಂಧಪಟ್ಟವರಿಗೆ ಪತ್ರ ಮುಖೇನ ತಿಳಿಸಲಾಗುವುದೆಂದು ತಿಳಿಸಿದರು.

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಮಂಜುನಾಥ್ ರವರು ಮಾತನಾಡಿ ಪಾಲಿಕೆ ವತಿಯಿಂದ ನಿರ್ಮಿಸಿರುವ ಅಂಬೇಡ್ಕರ್ ಭವನವನ್ನು ಅಭಿವೃದ್ಧಿಪಡಿಸಿ ಮೊದಲನೇ ಅಂತಸ್ತನ್ನು ನಿರ್ಮಿಸಲು ಕೋರಿದರು. ಈ ಬಗ್ಗೆ ಅಧ್ಯಕ್ಷರು ಉತ್ತರಿಸಿ ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ಪತ್ರ ಬರೆಯುವಂತೆ ವಾರ್ಡಿನ ಅಭಿಯಂತರರಿಗೆ ಸೂಚಿಸಿದರು.

ಮು.ತಿ.ನೋ..



Scanned with CamScanner

- ಸಭೆಯಲ್ಲಿ ಹಾಜರಿದ್ದ ಸ್ಥಳೀಯರಾದ ಶ್ರೀ. ಜಿ. ಅಶೋಕ್ ರವರು ಮಾತನಾಡಿ ಹೊಂಬೇಗೌಡ ಕೊಳಚೆ ಪ್ರದೇಶದಲ್ಲಿ ಅಂಗನವಾಡಿ ಹಳೆಯ ಕಟ್ಟಡವಾಗಿದ್ದು, ಈ ಕಟ್ಟಡವನ್ನು ಹಾಲಿ ದೇವಸ್ಥಾನ ಮಾಡಿಕೊಳ್ಳಲಾಗಿರುತ್ತದೆ. ಆದ್ದರಿಂದ ದೇವಸ್ಥಾನವನ್ನು ತೆರವುಗೊಳಿಸಿ ಅಂಗನವಾಡಿ ಕಟ್ಟಡವನ್ನಾಗಿ ಪರಿವರ್ತಿಸಲು ಕೋರಿದರು. ಈ ಬಗ್ಗೆ ಅಧ್ಯಕ್ಷರು ಕೊಳಚೆ ನಿರ್ಮೂಲನಾ ಮಂಡಳಿರವರಿಗೆ ಪತ್ರ ವ್ಯವಹರಿಸಲು ವಾರ್ಡಿನ ಅಭಿಯಂತರರಿಗೆ ಸೂಚಿಸಿದರು.

- ಕೆ.ಹೆಚ್.ಬಿ ಕ್ವಾಟ್ರಸ್ ನಲ್ಲಿ ರಸ್ತೆಗೆ ಅಳವಡಿಸಿರುವ ಗೇಟ್ ಅನ್ನು ತೆರವುಗೊಳಿಸಲು ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿತ್ತು. ಈ ಸಭೆಗೆ ಹಾಜರಾಗಿದ್ದ ಕೆ.ಹೆಚ್.ಬಿ ಕ್ವಾಟ್ರಸ್‌ನ ಮಾಜಿ ಸದಸ್ಯರು ಮಾತನಾಡಿ ಸದರಿ ಸ್ಥಳವು ಕೆ.ಹೆಚ್.ಬಿ ಇಲಾಖೆಗೆ ಸಂಬಂಧಪಟ್ಟಿದ್ದು, ಸುರಕ್ಷತೆಗಾಗಿ ಗೇಟ್ ಅಳವಡಿಸಲಾಗಿರುವುದಾಗಿ ಸಭೆಗೆ ತಿಳಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

(ಆರ್. ಕೊಟ್ರೇಶ್‌ನಾಯಕ್)
ಕಾರ್ಯದರ್ಶಿ
ವಾರ್ಡ್-144 ಸಿದ್ದಾಪುರ

(ನರಸಿಂಹಮೂರ್ತಿ) 26/3/21
ನೋಡಲ್ ಅಧಿಕಾರಿ
ವಾರ್ಡ್-144 ಸಿದ್ದಾಪುರ



Scanned with CamScanner